1—30 P.M.

† ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆ ಪಹಿಸಿಕೊಟ್ಟಾಗ ಒಂದು ಚಾಪಿಯಲ್ಲಿ ನೀರು ಬರುವ ಪರಿಸ್ಥಿತಿ ಇತ್ತು. ಆದರೆ ಮಟೀರಿಯಲ್ಸ್ ಬಂದಾಗ ಪುನ : ಕೊಡಲು ತೊಂದರೆಯೇನು ಇಲ್ಲ, ಅಷ್ಟಾದರೂ ಉಪಯೋಗವಾಗಲಿ ಎಂದು ಕೊಟ್ಟಿದ್ದಾರೆ. ಬಾಕಿ ಇರುವುದನ್ನು ಮಾಡ ಬಾರದು ಎಂಬ ಉದ್ದೇಶವಿಲ್ಲ. ಅದನ್ನು ಮಾಡುತ್ತೇವೆ. ಮತ್ತೆ ಆ ಸ್ಕೀಮನ್ನು ಪೂರ್ಣವಾಗಿ ಮಾಡಬೇಕೆಂದು ಇದೆ.

ಶ್ರೀ ಜೆ. ಎಲ್. ಕಬಾಡಿ.—ಟೌನ್ ಪಂಚಾಯತಿಯವರು ಪದೇ ಪದೇ ವಿನಂತಿ ಮಾಡಿದರೂ ಸಹಿತ ಇನ್ನೂ ಯಾವ ಕಾರ್ಯಕ್ರಮವನ್ನು ಕೈಕೊಂಡಿಲ್ಲ. ಅಲ್ಲದೆ ಇಂಡಿಗಿ ತಾಲ್ಲೂಕಿಗೆ ಅಥರ್ಗ. ಹಾರತಿ, ಹಳಸಂಗಿ, ಬಾತಗುಣಕಿ ಮತ್ತು ನಿಂಬಳ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಅಲ್ಲಿನ ಜನರು ಬೇಕಾದಷ್ಟು ಮನವಿ ಮಾಡಿದರೂ ಸಹಿತ ನೀರನ್ನು ಒದಗಿಸಿಕೊಡುವ ಯೋಜನೆ ಮಾಡಿಲ್ಲ. ಅಲ್ಲಿಗೆ ಎರೆಕ್ಟಿಸಿಟಿ ಪಂಪ್ ಹಾಕಿ ಬೋರ್‌ವೆಲ್ ಹಾಕಿಸಿಕೊಡಬೇಕು. ಇಲ್ಲಿ ಯವರೆಗೆ ಆ ಕಾರ್ಯಕ್ರಮ ಕೈಕೊಂಡಿಲ್ಲ. ಆದ್ದರಿಂದ ಯಾವಾಗ ಈ ಕೆಲಸಗಳನ್ನು ಮಾಡಿ ಅವರಿಗೆ ಒದಗಿಸಿಕೊಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಅದೆಲ್ಲವೂ ನಿಮಗೆ ಗೊತ್ತಿದೆ. 64 ಫಾಮಿನ್‌ನಲ್ಲಿ ಇನ್ನು ಕೆಲವು ಯುನಿಸೆಫ್ ಸ್ಕೀಮಿನಲ್ಲಿ ಕೆಲಸ ಮಾಡುವುದಿದೆ. ಈಗ ನಮ್ಮಲ್ಲಿ ತರತಕ್ಕಂಥ ರಿಗ್ಸ್‌ಗಳು ಸಾಕಾಗಿಲ್ಲ. ಎಲ್ಲೆಲ್ಲಿ ಆವಶ್ಯಕತೆ ಇದೆ ಎನ್ನುವುದನ್ನು ನೋಡಿ ಕೊಡಿಸೋಣ. ಅದನ್ನು ಮಾಡಿಸಬಾರದು ಎನ್ನು ಉದ್ದೇಶವಿಲ್ಲ. ಮತ್ತೆ ಯಾವುದೋ ಕಾರಣಾಂತರದಿಂದ ಆಗದೆ ಇರುವುದನ್ನು ನೋಡಿ ಮಾಡಿಸುತ್ತೇವೆ ಅಲ್ಲಿಯವರೆಗೆ ಸುಧಾರಿಸಿಕೊಳ್ಳಬೇಕು.

ಶ್ರೀ ಜೆ. ಎಲ್. ಕಾಬಾಡಿ —ಬೀಜಾಪುರ ಜಿಲ್ಲೆಯ ಇಂಡಿಗಿ ತಾಲ್ಲೂಕಿಗೆ ಕುಡಿಯುವ ನೀರಿನ ಅಭಾವ ಜಾಸ್ತಿ ಇರುವುದರಿಂದ ಅದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂದು ಏನಾದರೂ ಒಂದು ಸ್ಕೀಮ್ ತೆಗೆದುಕೊಂಡು ಅಲ್ಲಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಸಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅಸೆಂಬ್ಲಿ ಆದಮೇಲೆ ನಿಮ್ಮ ಜಿಲ್ಲೆಯಲ್ಲಿ ಟೂರ್ ಹಾಕಿಕೊಂಡು ಅದನ್ನೆಲ್ಲಾ ನೋಡಿ ಅಲ್ಲಲ್ಲಿಗೆ ಬಂದಾಗ ಅಲ್ಲಿಯ ಚೀಫ್ ಇಂಜೀನಿಯರ್ ಅವರಿಗೆ ತಿಳಿಸಿ ಅದನ್ನು ಪರಿಹಾರ ಮಾಡಿಸೋಣ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ತಮ್ಮ ಉತ್ತರದಿಂದ ಹಣದ ಕೊರೆತೆಯಿದೆ ಎಂದು ಗೊತ್ತಾಗುತ್ತದೆ. ಈ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಹಣ ಒದಗಿಸುವ ನಲುವಾಗಿ ವರ್ಲ್ಡ್ ಬ್ಯಾಂಕ್ ಮತ್ತು ನ್ಯಾಷನಲೈಸ್ಡ್ ಬ್ಯಾಂಕ್‌ಗಳ ಏಜೆನ್ಸಿಗಳನ್ನು ಅಪ್ರೋಚ್ ಮಾಡಬೇಕೆಂದು ಯೋಜನೆ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲೆಲ್ಲಿ ಹಣ ಬರುತ್ತದೆಂದು ತಿಳಿದರೆ ಅಲ್ಲಿಂದ ಪಡೆಯಲು ನಾವು ಕೂಡ ಪ್ರಯತ್ನ ಮಾಡುತ್ತಿದ್ದೇವೆ.

Madam SPEAKER.—Now Question Hour is over.

QUESTIONS FOR ANSWERS ON THE DAY
(but not taken up)

** Relief Measures in Drought Affected Areas*

171. Sri H. T. KRISHNAPPA (Nagamangala) .—

Will the Minister for Public Works and Electricity be pleased to state :—

(*a*) the criterion for declaring a particular desirict as a drought affected area ;

(*b*) the kind of relief the Government intend to provide for the drought affected areas ?

Sri H. M. CHANNABASAPPA (Minister for Public Works and Electricity) .—

(*a*) The old Famine Codes which are no longer relevant to the present conditions did provide for declaring the areas as famine affected. But in recent times, the scope and concept of famine relief have undergone redical change and it is no longer necessary and desirable to declare any area which is affected by drought as " Famine Area ".

(*b*) All necessary relief measures will be taken in the drought affected areas with the main object of giving employment to the affected people.

* *Roads under the control of P.W.D. Sub-Divisions in Dharwar District.*

353. Sri K. H. KURUDAGI (Mundaragi) .—

Will the Minister for Public Works and Electricity be pleased to state :—

the total number of P.W.D. Sub-Divisions in Dharwar District and the number of kilometers of road under their control ?

Sri H. M. CHANNABASAPPA (Minister for Public Works and Electricity) .—

There are 16 P.W.D. sub-divisions in this district and a total of 2951 kilometer length of road is under their control.

CALLING ATTENTION TO MATTERS OF URGENT PUBLIC IMPORTANCE.

(i) re : *alleged attempt to rape a woman patient by the Doctor of Ayanur Hospital, Shimoga Taluk.*

Sri S. M. SHEERNALY CHANDRASEKHAR (Hosanagar) .— I call the attention of the Minister for Health to the attempt of the doctor of Ayanur Hospital in Shimoga Taluk to rape a woman patient.